ಓ.ಎಸ್-80/2023 ಡಿ.ಡಬ್ಲ್ಯೂ-5 (ಜಯರಾಮು)

ದಿನಾಂಕಃ **17.12.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ.ಎನ್.ಕೆ.ಎಸ್.ವಕೀಲರಿಂದ :**

(ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ, ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.)

**ಪಾಟೀ ಸವಾಲು : ವಾದಿ ಪರ ಶ್ರೀ ಎಸ್.ಕೆ.ವಕೀಲರಿಂದ :**

ವಾದಿ ಮತ್ತು ಪ್ರತಿವಾದಿ ನನ್ನ ಸಂಬಂಧಿಕರು. ಸಂಬಂಧದಲ್ಲಿ ಪ್ರತಿವಾದಿ ನನಗೆ ಮಗನಾಗಬೇಕು. ನನ್ನ ತಂದೆ ಹಾಗೂ ಪ್ರತಿವಾದಿಯ ತಂದೆ ದಾಯಾದಿಗಳಾಗಿರುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ರವಿಕುಮಾರ್ ಮತ್ತು ಮಂಚಮ್ಮ ಮನೆ ಕಟ್ಟುವಾಗ ಪಾಯ ಹಾಕಲು ನನ್ನನ್ನು ಕರೆದಿದ್ದರು, ನಾನೇ ಪಾಯ ಹಾಕಿರುತ್ತೇನೆ, ನಾನು ಮನೆ ಕಟ್ಟುವ ಕೆಲಸ ಮಾಡುತ್ತೇನೆ. ಸದರಿ ಮನೆ ಕಟ್ಟಲು ಗುತ್ತಿಗೆಗೆ ವಹಿಸಿಕೊಂಡಿರಲಿಲ್ಲ. ಮನೆ ಕಟ್ಟಿದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನಾನು ಸದರಿ ಮನೆಯನ್ನು ಪೂರ್ಣ ಪ್ರಮಾಣದಲ್ಲಿ ಕಟ್ಟಲು ವಹಿಸಿಕೊಂಡಿರಲಿಲ್ಲ. ನಾನು 30x48 ಅಡಿ ಆಸ್ತಿಯಲ್ಲಿ ಮನೆ ಕಟ್ಟಿದ್ದೆನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಗೆ ಮಾಲೀಕರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ರವಿಕುಮಾರ್ ಮನೆ ಕಟ್ಟಿರುತ್ತಾರೆ ಎಂದು ಹೇಳುತ್ತಾರೆ. ರವಿಕುಮಾರ್ ರವರು ಮನೆ ಕಟ್ಟಿಕೊಂಡಿರುತ್ತಾರೆಂದು ಹೇಳಿರುವ ಜಾಗ ಮೊದಲು ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ರವಿಕುಮಾರ್ ರವರು ದಾವಾ ಆಸ್ತಿಯಲ್ಲಿ ಯಾವತ್ತೂ ಸಹ ಮನೆ ನಿರ್ಮಾಣ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ವಾದಿಯ ಚಿಕ್ಕಪ್ಪನ ಮಗ

ಎಂದರೆ ಸರಿ. ಪ್ರತಿವಾದಿಯು ಹುಟ್ಟಿದಾಗಿನಿಂದಲೂ ಬೊಂತಗಳ್ಳಿಯಲ್ಲಿ ವಾಸವಾಗಿರುತ್ತಾರೆ. ರವಿಕುಮಾರ್, ಅವರ ತಂದೆ ಹಾಗೂ ತಾಯಿಯ ನಡುವೆ ಕೇಸು ನಡೆಯುತ್ತಿತ್ತು ಎಂದರೆ ಸರಿ. ಆ ಕಾರಣಕ್ಕಾಗಿ ಅವರು ಯರಗನಹಳ್ಳಿ ವಾಸವಾಗಿದ್ದರು ಎಂದರೆ ಸರಿ. ಪ್ರತಿವಾದಿ ಬೊಂತಗಳ್ಳಿಗೆ ಬಂದಾಗ ಸಣ್ಣಯ್ಯರವರ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದರೆ ಸಾಕ್ಷಿಯು ದೊಡ್ಡಪ್ಪರವರ ಮನೆಯಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಸಣ್ಣಯ್ಯರವರ ಮನೆಯಲ್ಲಿ ವಾಸವಾಗಿದ್ದ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಗೆ ಇನ್ನೂ ಆಸ್ತಿಗಳಿವೆ ಎಂದರೆ ನನಗೆ ಗೊತ್ತಿಲ್ಲ. ಗ್ರಾಮದಲ್ಲಿ ಪ್ರತಿವಾದಿಗೆ ಇನ್ನೊಂದು ಮನೆ ಇರುತ್ತದೆ. ಆ ಮನೆಯನ್ನು ಇನ್ನೂ ಪೂರ್ಣಗೊಳಿಸಿಲ್ಲ. ಆ ಮನೆಯಲ್ಲಿ ಮಾದಮ್ಮ ವಾಸವಾಗಿರುತ್ತಾರೆ ಮತ್ತು ಕುರಿಗಳನ್ನು ಕಟ್ಟುತ್ತಾರೆ ಎಂದು ನುಡಿಯುತ್ತಾರೆ. ಸಾಧ್ಯವಾದರೇ ಪ್ರತಿವಾದಿಗೆ ಈ ಮನೆ ಮತ್ತು ಆ ಮನೆ ಎರಡೂ ಸೇರಲಿ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ನಾನು ಪ್ರತಿವಾದಿಯೊಂದಿಗೆ ಚೆನ್ನಾಗಿರುತ್ತೇನೆ ಎಂದರೆ ಇಬ್ಬರೊಂದಿಗೆ ಚೆನ್ನಾಗಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳು ಸುಳ್ಳು, ಪ್ರತಿವಾದಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕತಾಯಮ್ಮರವರಿಗೆ ಸೇರಿದ ಮನೆಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿದ್ದು, ತೊಂದರೆ ಕೊಡುತ್ತಿದ್ದಾರೆ ಎಂದರೆ ಸುಳ್ಳು.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**